1	2	3	4	5	6
ಶ್ರೀನಿವಾಸಪುರ	01				
ಕೋಲಾರ				01	01
ಮುಳಬಾಗಿಲು			01		
ಮಾಲೂರು			01		
ಶಿಡ್ಲಘಟ್ಟ		01			
ಗೌರಿಬಿದನೂರು	01				

ಆ) ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

96 (161) ಶ್ರೀ ರಾಜೇಂದ್ರ ಎಸ್. (ಕೆ.ಜಿ.ಎಫ್.) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಜಿ.ಎಫ್. ನಲ್ಲಿನ ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಘಟಕಗಳ ಹಾಗೂ ವೈದ್ಯಕೀಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು, ತಂತ್ರಜ್ಞರು, ಶುಶ್ರೂಷಕರ ಸಂಖ್ಯೆ ಎಷ್ಟು: (ಸರ್ಕಾರಿ ಆಸ್ಪತ್ರೆ ಆರೋಗ್ಯ ಘಟಕಗಳು ಹಾಗೂ ಆರೋಗ್ಯ ಕೇಂದ್ರಗಳಲ್ಲಿನ ಖಾಲಿ ಹುದ್ದೆಗಳ ಮಾಹಿತಿ ಒದಗಿಸುವುದು)

ಆ) ಈ ಹುದ್ದೆಗಳು ಯಾವಾಗಿನಿಂದ ಖಾಲಿ ಇರುತ್ತವೆ:

ಇ) ಸದರಿ ಘಟಕಗಳಲ್ಲಿ ರೋಗಿಗಳಿಗೆ ಲಭ್ಯವಿರುವ ವೈದ್ಯಕೀಯ ಸೌಲಭ್ಯಗಳು ಯಾವುವು;

ಈ) ಸದರಿ ಖಾಲಿ ಹುದ್ದೆಗಳನ್ನು ತುಂಬಲು ಹಾಗೂ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಪೂರೈಸುವ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕೆ.ಜಿ.ಎಫ್.ನ ಸರ್ಕಾರಿ ಆಸ್ಪತ್ರೆಯಲ್ಲಿನ ಖಾಲಿ ಹುದ್ದೆಗಳು ಈ ರೀತಿ ಇದೆ.

1)	ವೈದ್ಯರು	–2
2)	ತಂತ್ರಜ್ಞರು	–0
3)	ಶುಶ್ರೂಷಕರು	–3
4)	ಶುಶ್ರೂಷಕ ಅಧೀಕ್ಷಕರು ದರ್ಜೆ–1	–1
5)	ಶುಶ್ರೂಷಕ ಅಧೀಕ್ಷಕರು ದರ್ಜೆ–2	–1
6)	ಹಿರಿಯ ಶುಶ್ರೂಷಕರು	–1
7)	ಹಿರಿಯ ಔಷಧ ವಿತರಕರು	–1
8)	ನೇತ್ರ ಸಹಾಯಕರು	–1
9)	ಕಛೇರಿ ಅಧೀಕ್ಷಕರು	–1
10)	ದ್ವಿ.ದ. ಸಹಾಯಕರು	–1
11)	ಗ್ರೂಪ್–ಡಿ ನೌಕರರು	–13

ಕೆ.ಜಿ.ಎಫ್. ನಗರ ವ್ಯಾಪ್ತಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಅಂಡರ್‌ಸನ್‌ಪೇಟೆ ಹಾಗೂ ಒಂದು ಪ್ರಾಆಘಟಕ ಉರಿಗಾಂವ್‌ಪೇಟೆ ಆರೋಗ್ಯ ಕೇಂದ್ರಗಳಿದ್ದು ಇವುಗಳಲ್ಲಿ ಯಾವುದೇ ಹುದ್ದೆ ಖಾಲಿ ಇರುವುದಿಲ್ಲ.

ಆ) ಈ ಹುದ್ದೆಗಳು ವಿವಿಧ ಕಾಲದಿಂದ ಖಾಲಿ ಇರುತ್ತವೆ.

ಇ) ಹೊರರೋಗಿಗಳ ವಿಭಾಗ, ಮೂಳೆ ಮತ್ತು ಕೀಲು ವಿಭಾಗ, ಮಕ್ಕಳ ವಿಭಾಗ, ಕಿವಿ ಮತ್ತು ಗಂಟಲು ವಿಭಾಗ, ವೈದ್ಯಕೀಯ ವಿಭಾಗ, ಶಸ್ತ್ರ ಚಿಕಿತ್ಸಕರ ವಿಭಾಗ, ನೇತ್ರ ವಿಭಾಗ, ಎಸ್.ಟಿ.ಡಿ. ಮತ್ತು ಏಸಿಟಿಸಿ ಕೇಂದ್ರ, ದಂತ ವಿಭಾಗ, ಮೈನರ್ ಓಟಿ, ಮೇಜರ್ ಓಟಿ, ಪ್ರಯೋಗ ಶಾಲೆ, ಕ್ಷ-ಕಿರಣ ವಿಭಾಗ, ಇಜಿಸಿ ವಿಭಾಗ ಮಾತ್ರ ವಿತರಣಾ ಕೇಂದ್ರ, ತುರ್ತು ಚಿಕಿತ್ಸೆ ವಿಭಾಗ, ಶವಾಗಾರ, ತುರ್ತು ವಾಹನ ಸೌಲಭ್ಯಗಳಿವೆ.

ಈ) ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ ಇತರೆ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಲಭ್ಯವಿರುವ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ರೋಗಿಗಳಿಗೆ ಒದಗಿಸಲಾಗುತ್ತಿದೆ.

97 (205) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನಬಾಗೇವಾಡಿ ತಾಲ್ಲೂಕಿನ ಕೋಲ್ಹಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳುಳ್ಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹಾಗಿಲ್ಲದಿದ್ದಲ್ಲಿ, ಮೇಲ್ದರ್ಜೆಗೇರಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳುಳ್ಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಮೇಲ್ದರ್ಜೆಗೇರಿಸಲು ತೆಗೆದುಕೊಳ್ಳುವ ಕಾಲಮಿತಿ ಎಷ್ಟು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಹೌದು.

ಇ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಲಾಗುತ್ತಿದೆ.

ಈ) ಅವಶ್ಯಕತೆ ಮತ್ತು ಅನುದಾನಕ್ಕೆ ಅನುಗುಣವಾಗಿ ಮೇಲ್ದರ್ಜೆಗೇರಿಸಲಾಗುವುದು.